ಕರ್ನಾಟಕ ಸರ್ಕಾರ
ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ,ಬೆಂಗಳೂರು-560012
ದೂರವಾಣಿ ಸಂಖ್ಯೆ: 080-23561944, 23361860 ಫ್ಯಾಕ್ಸ್: 080-23361852

ಸಂಖ್ಯೆ: ಪಪೂಶಿಇ/ಪರೀಕ್ಷೆ/ಉದಪ/2016-ಪರೀಕ್ಷೆ/2015-16. ದಿನಾಂಕ:03-03-2016.

## ದರಪಟ್ಟಿ ಪ್ರಕಟಣೆ

ವಿಷಯ: 2016ರ ದ್ವಿತೀಯ ಪಿಯುಸಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ವಿವಿಧ ಕಾರ್ಯಗಳನ್ನು ನಿರ್ವಹಿಸುವ ಅಧಿಕಾರಿಗಳಿಗೆ/ಸಿಬ್ಬಂದಿಗಳಿಗೆ ಉಪಾಹಾರದ ವ್ಯವಸ್ಥೆ ಮಾಡಲು ದರಪಟ್ಟಿ ಕರೆಯುವ ಬಗ್ಗೆ.

* * * * *

2016ರ ದ್ವಿತೀಯ ಪಿಯುಸಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಕಾರ್ಯ ನಿರ್ವಹಿಸುವ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಉಪಹಾರದ ವ್ಯವಸ್ಥೆ ಮಾಡಬೇಕಾಗಿದೆ. ಒದಗಿಸಬೇಕಾದ ಉಪಹಾರದ ಪ್ರಮಾಣವನ್ನು ಒಂದು ದಿನ ಮೊದಲು ತಿಳಿಸಲಾಗುವುದು. ದರಪಟ್ಟಿಯನ್ನು ಕೆಳಗೆ ತಿಳಿಸಲಾದ ನಾಲ್ಕು ಅವಧಿಗಳಿಗೆ ಪ್ರತ್ಯೇಕವಾಗಿ ಉಪಾಹಾರ/ಲಘು ಭೋಜನದ ಅವಶ್ಯಕತೆಗಳನ್ನು ಪೂರೈಸಲು ದರಪಟ್ಟಿಯನ್ನು ಕರೆಯಲಾಗಿದೆ.

| ಕ್ರ.ಸಂ. | ದಿನಾಂಕ | |
|---|---|---|
| | ಯಿಂದ | ವರೆಗೆ |
| 1. | 15-03-2016 | 17-03-2016 |
| 2. | 18-03-2016 | 21-03-2016 |
| 3. | 22-03-2016 | 24-03-2016 |
| 4. | 26-03-2016 | 31-03-2016 |

### ದರಪಟ್ಟಿ ಸಲ್ಲಿಸಬೇಕಾದ ಐಟಂ ವಿವರ:

| ಸಂಖ್ಯೆ | ಉಪಾಹಾರ ವಿವರ | ಬೆಲೆ ಪ್ರತಿ ಪ್ಲೇಟ್‌ಗೆ ₹. ಗಳಲ್ಲಿ (ಎಲ್ಲಾ ತೆರಿಗೆ ಸೇರಿ) |
|---|---|---|
| 1. | ಪ್ಯಾಕ್ಡ್ ಉಪಾಹಾರ: | |
| | a. ಚೌಚೌ ಭಾತ್+ ಕಾಫಿ/ಟೀ | |
| | b. ಇಡ್ಲಿ(2) + ವಡೆ(1) + ಕಾಫಿ/ಟೀ | |
| | c. ವೆಜ್ ಪಲಾವ್ + ಕಾಫಿ/ಟೀ | |
| | d. ಸೆಟ್ ದೋಸೆ(3) + ಕಾಫಿ/ಟೀ | |
| | e. ಬಿಸಿ ಬೇಳೆ ಭಾತ್ + ಮಸಾಲೆ ವಡೆ + ಕಾಫಿ/ಟೀ | |
| 2. | ಲಘು ಉಪಾಹಾರ (ಸೇವೆ ಸಹಿತ): | |
| | a. ಚೌಚೌ ಭಾತ್+ ಕಾಫಿ/ಟೀ | |
| | b. ಇಡ್ಲಿ(2) + ವಡೆ(1) + ಕಾಫಿ/ಟೀ | |
| | c. ವೆಜ್ ಪಲಾವ್ + ಕಾಫಿ/ಟೀ | |
| | d. ಸೆಟ್ ದೋಸೆ(3) + ಕಾಫಿ/ಟೀ | |
| | e. ಬಿಸಿ ಬೇಳೆ ಭಾತ್ + ಮಸಾಲೆ ವಡೆ + ಕಾಫಿ/ಟೀ | |

| ಸಂಖ್ಯೆ | ಉಪಾಹಾರ ವಿವರ | ಬೆಲೆ ಪ್ರತಿ ಪ್ಲೇಟ್‌ಗೆ ₹. ಗಳಲ್ಲಿ (ಎಲ್ಲಾ ತೆರಿಗೆ ಸೇರಿ) |
|---|---|---|
| 3. | **ಪೂರ್ಣ ಪ್ರಮಾಣದ ಉಪಹಾರ (ಸೇವೆ ಸಹಿತ):** | |
| | a. ಬಿಸಿ ಬೇಳೆ ಭಾತ್ + ಮೊಸರನ್ನ + ಮಸಾಲ ವಡೆ | |
| | b. ಲಘು ಭೋಜನ ಚಪಾತಿ(2) ಸಹಿತ | |

ಮೇಲಿನ ಕ್ರಮ ಸಂಖ್ಯೆ 01, 2 ಮತ್ತು 03 ರಲ್ಲಿ ತಿಳಿಸಲಾದ ಐಟಂ a, b, c, d & e ಗಳಿಗೆ ತಿಳಿಸಲಾಗುವ ಪ್ರತಿ ಐಟಂಗಳ ಕಡಿಮೆ ದರ ಸೂಚಿಸುವವರನ್ನು ಪರಿಗಣಿಸಲಾಗುವುದು.

**ಷರತ್ತುಗಳು:**

1. ಉತ್ತಮ ಗುಣಮಟ್ಟದ ಉಪಹಾರವನ್ನು ಒದಗಿಸಬೇಕು.
2. ಕುಡಿಯಲು ಶುದ್ಧ ನೀರನ್ನು ಒದಗಿಸಬೇಕು.
3. ಸಮಯಕ್ಕೆ ಸರಿಯಾಗಿ ಉಪಹಾರವನ್ನು ಒದಗಿಸಬೇಕು.
4. ಪೂರೈಕೆದಾರರು ಅಧಿಕೃತ ಲೈಸೆನ್ಸ್ ಹೊಂದಿರಬೇಕು (ಪ್ರತಿಯನ್ನು ದರ ಪಟ್ಟಿಯೊಂದಿಗೆ ಲಗತ್ತಿಸುವುದು).
5. ಪೂರೈಕೆದಾರರು ಸದರಿ ಉದ್ಯೋಗವನ್ನು ನಡೆಸುತ್ತಿರುವ ಬಗ್ಗೆ ಕಳೆದ ಎರಡು ವರ್ಷದ ಅನುಭವ ಹೊಂದಿರಬೇಕು (ಈ ಸಂಬಂಧ ಸ್ವಯಂ ಪ್ರಮಾಣೀಕರಿಸಿದ ಪತ್ರ ಲಗತ್ತಿಸುವುದು).
6. ಪ್ರತಿ ಒಂದು ಅವಧಿಯ ಒಟ್ಟಾರೆ ಸರಬರಾಜು ರೂಪಾಯಿ ಒಂದು ಲಕ್ಷದ ಒಳಗಡೆ ಇರತಕ್ಕದ್ದು.

ಉಪಾಹಾರ ಸರಬರಾಜು ಮಾಡಲು ಸೂಕ್ತ ವ್ಯವಸ್ಥೆ ಹೊಂದಿರುವವರು ತಮ್ಮ ದರಪಟ್ಟಿಯನ್ನು ನೀಡಲು ಇಚ್ಛಿಸುವವರು ಮೊಹರು ಮಾಡಿದ ಲಕೋಟೆಯಲ್ಲಿ ದಿನಾಂಕ 10-03-2016ರ ಅಪರಾಹ್ನ 03:00 ಗಂಟೆಗಳ ಒಳಗಾಗಿ **'ಜಂಟಿ ನಿರ್ದೇಶಕರು (ಪರೀಕ್ಷೆ), ಪದವಿ ಪೂರ್ವ ಶಿಕ್ಷಣ ಇಲಾಖೆ'** ಇವರಿಗೆ ಸಲ್ಲಿಸಲು ತಿಳಿಸಿದೆ.

**ನಿರ್ದೇಶಕರು,**
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಯನ್ನು:**

1. ಇಲಾಖಾ ಸೂಚನಾಪಲಕ್ಕೆ.
2. ಸಹಾಯಕ ನಿರ್ದೇಶಕರು, (ಇ-ಆಡಳಿತ) (ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು).
3. ಲೆಕ್ಕಪತ್ರಾಧಿಕಾರಿಗಳಿಗೆ, ಲೆಕ್ಕಪತ್ರಶಾಖೆ.
4. ಹೆಚ್ಚುವರಿ / ಕಛೇರಿ ಪ್ರತಿ.